KSSIDC

# Karnataka State Small Industries Development Corporation Ltd.

(A Government of Karnataka Undertaking)

**Regd. Office :** A.O. Building, Industrial Estate, Rajajinagar, Bangalore - 560 010
**Telephone :** 080 - 2340 7011 to 25, **Fax :** 91-080-2314 3566 / 2338 9070 **Grams :** MYSMALCORP
**E-mail :** kssidcho@vsnl.com **Website :** www.kssidc.kar.nic.in

ಮೈಸೂರು-ವಿ:ಕೈವ:ಮಾಹಿತಿ ಹಕ್ಕು:2013: /215

ಯಾದವಗಿರಿ, ಮೈಸೂರು
03-06-2013

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಭೂಸ್ವಾಧೀನ),
ಕರಾಸಕೈಅನಿನಿ,
ಕೈಗಾರಿಕಾ ವಸಾಹತು,
ರಾಜಾಜಿನಗರ,
ಬೆಂಗಳೂರು-10.

ಮಾನ್ಯರೆ,

ವಿಷಯ:- ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:- ತಮ್ಮ ಕಛೇರಿ ಪತ್ರದ ಸಂಖ್ಯೆ 217 ದಿನಾಂಕ 15-04-2013.

- - - - -

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ತಿಳಿಸಿರುವಂತೆ, ಮೈಸೂರು ವಿಭಾಗೀಯ ಕಛೇರಿಯ ವ್ಯಾಪ್ತಿಗೊಳಪಟ್ಟ ಮಾಹಿತಿ ಹಕ್ಕು ಅಧಿನಿಯಮ 2005ರ ವಿಧಿ 4(1)(ಬಿ) ಕಾಯ್ದೆಯ 17 ಅಂಶಗಳ ಅಡಿಯಲ್ಲಿ ಮಾಹಿತಿ ತಯಾರಿಸಿ, ಈ ಪತ್ರದೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕರು (ಆ)
ಮೈಸೂರು

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
KSSIDC
7 JUN 2013
ಬೆಂಗಳೂರು-560 010
ಸಂಖ್ಯೆ 8339

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
## ಮೈಸೂರು ವಿಭಾಗ.

ಮಾಹಿತಿ ಹಕ್ಕು ಅಧಿನಿಯಮ ವಿಧಿ 4(1(ಬಿ) ಅಡಿ ಕೆ.ಎಸ್.ಎಸ್.ಐ.ಡಿ.ಸಿ.
**ಮೈಸೂರು** ವಿಭಾಗೀಯ ಕಚೇರಿಯ ಮಾಹಿತಿ

## 1. ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು :-

ಮೈಸೂರು ವಿಭಾಗೀಯ ಕಚೇರಿಯು 1964 ರ ಸಾಲಿನಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ.

**ಅ)** ರಚನೆ: ಮೈಸೂರು ವಿಭಾಗೀಯ ಕಚೇರಿಯ ಅಧಿಕಾರಿ ವರ್ಗದ ವಿವರ ಈ ಕೆಳಗಿನಂತಿದೆ.

| | | |
|---|---|---|
| ವ್ಯವಸ್ಥಾಪಕರು(ಆಡಳಿತ) | – | 1 ಸಂಖ್ಯೆ |
| ಸಹಾಯಕ ವ್ಯವಸ್ಥಾಪಕರು | – | 2 ಸಂಖ್ಯೆ |
| ಶೀಘ್ರಲಿಪಿಗಾರರು | – | 1 ಸಂಖ್ಯೆ |
| ಹಿರಿಯ ಸಹಾಯಕರು | – | 3 ಸಂಖ್ಯೆ |
| ಕಿರಿಯ ಸಹಾಯಕರು | – | 3 ಸಂಖ್ಯೆ |
| ನಾಲ್ಕನೇ ದರ್ಜೆ ನೌಕರರು | – | 4 ಸಂಖ್ಯೆ |

**ಆ)** ಕಾರ್ಯಗಳು ಮತ್ತು ಕರ್ತವ್ಯಗಳು:

1. ನಿಗಮವು ಸರ್ಕಾರ ಮತ್ತು ಕೆ.ಐ.ಎ.ಡಿ.ಬಿ. ಪ್ರಾಧಿಕಾರದಿಂದ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಜಮೀನುಗಳನ್ನು ಹಂಚಿಕೆ ಪಡೆದು ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಮೂಲಭೂತ ಸೌಲಭ್ಯಗಳೊಂದಿಗೆ ಕೈಗಾರಿಕಾ ನಿವೇಶನಗಳು / ಮಳಿಗೆಗಳನ್ನು ನಿರ್ಮಿಸಿ ಅರ್ಹ ಉಧ್ಯಮಿಗಳಿಗೆ ಹಂಚಿಕೆ ಮಾಡುವ ಮೂಲಕ ವಿದ್ಯಾವಂತ ಯುವಕ ಮತ್ತು ಯುವತಿಯರನ್ನು ಸ್ವಾವಲಂಭಿಗಳನ್ನಾಗಿ ರೂಪಿಸುವುದು ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಹಾಗೂ ಒಟ್ಟಾರೆ ರಾಜ್ಯದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವ ಮಹತ್ತರ ಕಾರ್ಯಗಳನ್ನು ನಿಗಮವು ನಿರ್ವಹಿಸಿಕೊಂಡು ಬರುತ್ತಿದೆ.

2. ನಿಗಮವು ಕೈಗಾರಿಕಾ ಘಟಕಗಳಿಗೆ ಪೂರಕವಾದ C.R. Sheet, H.R. Sheet. Angles, M.S. Plate, Wire Rod, Rounds, TMTs, Cement, Paraffin Wax, Bitumen, ಇತ್ಯಾದಿ ಗುಣಮಟ್ಟದ ಕಚ್ಚಾ ಸರಕುಗಳನ್ನು ಪೂರೈಸುವ ಕಾರ್ಯವನ್ನು ಸಹ ನಿರ್ವಹಿಸುತ್ತಿದೆ.

3. ಮೈಸೂರು ವಿಭಾಗೀಯ ಕಚೇರಿ ವ್ಯಾಪ್ತಿಗೆ ಮೈಸೂರು, ಮಂಡ್ಯ , ಮಡಿಕೇರಿ ಮತ್ತು ಚಾಮರಾಜನಗರ ಜಿಲ್ಲೆಗಳು ಒಳಪಡುತ್ತವೆ. ಈ ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳು ಮತ್ತು ಈ ವಸಾಹತುಗಳಲ್ಲಿ ನಿರ್ಮಿಸಿರುವ ಕೈಗಾರಿಕಾ ಮಳಿಗೆ ಹಾಗೂ ಅಭಿವೃದ್ಧಿ ಪಡಿಸಿರುವ ನಿವೇಶನಗಳ ವಿವರ ಈ ಕೆಳಗಿನಂತಿದೆ.

ಮುಂದುವರೆದಿದೆ,,,,,2

| ಕ್ರ ಸಂ | ಕೈಗಾರಿಕಾ ವಸಾಹತು | ನಿರ್ಮಿಸಿರುವ ಒಟ್ಟು | | ಹಂಚಿಕೆ ಮಾಡಿರುವ ಒಟ್ಟು | | ಖಾಲಿಯಿರುವ ಒಟ್ಟು | | ಕ್ರಯ ಪತ್ರ ನೀಡಿರುವ ಒಟ್ಟು | |
|---|---|---|---|---|---|---|---|---|---|
| | | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು |
| 1 | ಯಾದವಗಿರಿ | 237 | 30 | 237 | 30 | 0 | 0 | 233 | 29 |
| 2 | ಮೇಟಗಳ್ಳಿ | 84 | 05 | 84 | 05 | 0 | 0 | 76 | 03 |
| 3 | ಹೆಬ್ಬಾಳ | 153 | 231 | 152 | 228 | 1 | 3 | 120 | 64 |
| 4 | ನಂಜನಗೂಡು | 32 | 0 | 32 | 0 | 0 | 0 | 16 | 0 |
| 5 | ಹುಣಸೂರು | 18 | 37 | 18 | 37 | 0 | 0 | 12 | 26 |
| 6 | ಹಿನ್‌ಕಲ್ | 0 | 9 | 0 | 0 | 0 | 9 | 0 | 0 |
| 7 | ಮಡಿಕೇರಿ | 22 | 6 | 22 | 6 | 0 | 0 | 21 | 05 |
| 8 | ಕುಶಾಲನಗರ | 16 | 22 | 15 | 22 | 1 | 0 | 05 | 19 |
| 9 | ಚಾಮರಾಜನಗರ | 0 | 46 | 0 | 26 | 0 | 20 | 0 | 0 |
| 10 | ಗುಂಡ್ಲುಪೇಟೆ | 0 | 56 | 0 | 38 | 0 | 18 | 0 | 0 |
| 11 | ಕೊಳ್ಳೇಗಾಲ | 24 | 16 | 24 | 16 | 0 | 0 | 21 | 14 |
| 12 | ಮಂಡ್ಯ 1ನೇ ಹಂತ | 44 | 19 | 44 | 19 | 0 | 0 | 29 | 15 |
| 13 | ಮಂಡ್ಯ 2ನೇ ಹಂತ | 28 | 03 | 28 | 03 | 0 | 0 | 18 | 02 |
| 14 | ಶ್ರೀರಂಗಪಟ್ಟಣ | 38 | 03 | 35 | 03 | 03 | 0 | 12 | 0 |
| 15 | ಪಾಂಡವಪುರ | 08 | 0 | 08 | 0 | 0 | 0 | 0 | 0 |
| 16 | ಸೋಮನಹಳ್ಳಿ | 08 | 21 | 08 | 21 | 0 | 0 | 1 | 08 |
| 17 | ನಾಗಮಂಗಲ | 08 | 21 | 08 | 0 | 0 | 21 | 0 | 0 |
| 18 | ಸೀಗೂರು | 10 | 0 | 10 | 0 | 0 | 0 | 10 | 0 |
| | ಒಟ್ಟು | 730 | 525 | 725 | 480 | 5 | 71 | 574 | 185 |

1. ಕೈಗಾರಿಕಾ ವಸಾಹತು, ಹೆಬ್ಬಾಳ, ಚಾಮರಾಜನಗರ, ಗುಂಡ್ಲುಪೇಟೆ, ಶ್ರೀರಂಗಪಟ್ಟಣಗಳಲ್ಲಿ ಖಾಲಿಯಿರುವ ಮಳಿಗೆ / ನಿವೇಶನಗಳ ಹಂಚಿಕೆಗೆ ಪತ್ರಿಕಾ ಪ್ರಕಟಣೆ ನೀಡಿದ್ದು, ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗಿದೆ.
2. ಕೈಗಾರಿಕಾ ವಸಾಹತು, ನಾಗಮಂಗಲದಲ್ಲಿ ಜಮೀನಿನ ತಕರಾರಿದ್ದು, ಸದ್ಯಕ್ಕೆ ಹಂಚಿಕೆಗೆ ಪರಿಗಣಿಸಿರುವುದಿಲ್ಲ. ಅಲ್ಲದೆ, ನಿವೇಶನಗಳ ಗುರುತು ಕಾರ್ಯ ಮಾಡಬೇಕಾಗಿದೆ.
3. ಕೈಗಾರಿಕಾ ವಸಾಹತು, ಹಿನಕಲ್‌ನ ಜಾಗವನ್ನು ವಸತಿ ನಿವೇಶನವನ್ನಾಗಿ ಪರಿವರ್ತಿಸಲು ತೀರ್ಮಾನ ತೆಗೆದುಕೊಂಡಿದ್ದು, ಸಂಬಂಧಪಟ್ಟ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಯುತ್ತಿರುತ್ತದೆ. ಅದ್ದರಿಂದ ಸದರಿ ನಿವೇಶನಗಳನ್ನು ಹಂಚಿಕೆಗೆ ಪರಿಗಣಿಸಿರುವುದಿಲ್ಲ.
4. ಕೈಗಾರಿಕಾ ವಸಾಹತು, ಪಾಂಡವಪುರದಲ್ಲಿ ಅಭಿವೃದ್ಧಿ ಕಾಮಗಾರಿ ಮಾಡುವ ಪ್ರಕ್ರಿಯೆ ನಡೆದಿದ್ದು, ಅನುಮೋದನೆ ನಂತರ ಅಭಿವೃದ್ಧಿಪಡಿಸಿ, ನಿವೇಶನಗಳನ್ನು ಗುರುತು ಮಾಡಿ ಹಂಚಿಕೆಗೆ ಕ್ರಮ ಜರುಗಿಸಲಾಗುವುದು.
5. ಕೈಗಾರಿಕಾ ವಸಾಹತು, ಸೀಗೂರಿನಲ್ಲಿರುವ ಮಳಿಗೆಗಳು ಹಾಗೂ ಒಟ್ಟಾರೆ ಸುಮಾರು 17 ಎಕರೆ ಜಮೀನು ಸಹಿತ ಮಾರಾಟ ಮಾಡಲಾಗಿದೆ.
6. ಸುಂದರನಗರ–ಕುಶಾಲನಗರದಲ್ಲಿ 2 ಎಕರೆ 18 ಗುಂಟೆ ಜಮೀನು ಇದ್ದು, ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಅಭಿವೃದ್ಧಿಪಡಿಸಿ, ನಿವೇಶನಗಳನ್ನು ಗುರುತು ಮಾಡಿ ಹಂಚಿಕೆಗೆ ಕ್ರಮ ಜರುಗಿಸಲಾಗುವುದು.